**ಸಾಕ್ಷಿಯನ್ನು ದಿನಾಂಕಃ 04.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ.ಪಿ.ಆರ್. /ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ವಾದಿಯ ತಂದೆಯ ಹೆಸರು ಗೊತ್ತಿರುವುದಿಲ್ಲ. ನಾನು ಹಾಗು ಪ್ರತಿವಾದಿಗಳು ಒಂದೇ ಊರಿನವರು ಎಂದರೆ ಸರಿ. ವಾದಿಯು ಏನು ಪರಿಹಾರ ಕೇಳಿ ಈ ದಾವೆ ಹೂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಸ.ನಂ. ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯು 1 ನೇ ಪ್ರತಿವಾದಿಯ ತಂಗಿಯ ಗಂಡ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಧಾರ ಪತ್ರದ ಬಗ್ಗೆ ನಮೂದಿಸಿದ್ದು ಸದರಿ ಆಧಾರ ಪತ್ರ ಬರೆಯುವಾಗ ನಾನು ಇದ್ದಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಆ ರೀತಿ ಯಾವುದೇ ಆಧಾರ ಪತ್ರ ಬರೆಸಿರುವುದಿಲ್ಲ ಬದಲಾಗಿ ಪ್ರತಿವಾದಿಗಳಿಗೆ ಅನುಕೂಲವಾಗಲೀ ಎನ್ನುವ ಕಾರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ದಿನಾಂಕಃ 01.06.2006 ರಂದು ಯಾವುದೇ ಪತ್ರ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರ ಯಾರು ಯಾರ ಹೆಸರಿಗೆ ಬರೆಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ 05 ಜನ ಗಂಡು ಮಕ್ಕಳಿರುತ್ತಾರೆ. ಕ್ರಯ ಪತ್ರವನ್ನು ಪ್ರತಿವಾದಿಗಳೆಲ್ಲರೂ ಸೇರಿ ಬರೆಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆಧಾರ ಪತ್ರವೆಂದು ಅವರು ಬರೆದುಕೊಟ್ಟಿದ್ದು ಅದನ್ನು ಕ್ರಯ ಪತ್ರವಾಗಿ ಮಾರ್ಪಾಟು ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ.

ಸದರಿ ಕ್ರಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭವವನ್ನು ಹೊಂದಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆಂದು ನುಡಿಯುತ್ತಾರೆ. ವಾದಿಯೇ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದರೂ ಸಹ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಅಣ್ಣೂರು ಗ್ರಾಮದಲ್ಲಿ ಇನ್ನು 05 ಎಕರೆ ಜಮೀನು ಇರುತ್ತದೆಂದರೆ ಸರಿ. 2 ರಿಂದ 6 ನೇ ಪ್ರತಿವಾದಿಗಳು ಮರಗೆಲಸ ಮಾಡಿಕೊಂಡು ಒಳ್ಳೆಯ ದುಡಿಮೆ ಇದ್ದು ಸ್ಥಿತಿವಂತರಾಗಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಗ್ರಾಮದವರೇ ಆಗಿದ್ದು ಅವರೇ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದರೂ ಸಹ ಪ್ರತಿವಾದಿಗಳಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**